ದಿನಾಂಕ : DATE
ಪತ್ರಿಕೆಯ ಹೆಸರು : NAME OF THE NEWS PAPER:
ಇಲಾಖೆ / ವಿಷಯ : DEPARTMENT / SUBJECT:

### ಮಾರ್ಚ್‌ನಲ್ಲಿ ಬಜೆಟ್ ಮಂಡನೆಗೆ ಸಿದ್ಧತೆ, ನಿಗದಿಯಾಗದ ದಿನಾಂಕ | ಸಚಿವ ಸಂಪುಟ ಸಭೆಯಲ್ಲಿ ತೀರ್ಮಾನ

# 28ರಿಂದ ರಾಜ್ಯ ವಿಧಾನ ಮಂಡಲದ ಜಂಟಿ ಅಧಿವೇಶನ

14-1-2021

ವಿಜಯವಾಣಿ ಸುದ್ದಿಜಾಲ ಬೆಂಗಳೂರು

ರಾಜ್ಯ ವಿಧಾನ ಮಂಡಲದ ಜಂಟಿ ಅಧಿವೇಶನ ಜ.28 ರಿಂದ ಫೆ.5ರವರೆಗೆ ನಡೆಯಲಿದೆ. ಮಾರ್ಚ್‌ನಲ್ಲಿ ಬಜೆಟ್ ಅಧಿವೇಶನ ನಡೆಸಲು ನಿರ್ಧರಿಸಲಾಗಿದ್ದರೂ ದಿನಾಂಕ ನಿಗದಿಯಾಗಿಲ್ಲ. ಬುಧವಾರ ಸಿಎಂ ಯಡಿಯೂರಪ್ಪ ನೇತೃತ್ವದಲ್ಲಿ ನಡೆದ ಸಚಿವ ಸಂಪುಟ ಸಭೆಯಲ್ಲಿ ಈ ಕುರಿತು ತೀರ್ಮಾನ ಕೈಗೊಳ್ಳಲಾಗಿದೆ.

ಸಂಪುಟ ಸಭೆಯ ಬಳಿಕ ಸುದ್ದಿಗೋಷ್ಠಿಯಲ್ಲಿ ಮಾಹಿತಿ ನೀಡಿದ ಕಾನೂನು ಮತ್ತು ಸಂಸದೀಯ ಸಚಿವ ಜೆ.ಸಿ.ಮಾಧುಸ್ವಾಮಿ, ಅಧಿವೇಶನದ ಮೊದಲ ದಿನ ರಾಜ್ಯಪಾಲರು ಭಾಷಣ ಮಾಡಲಿದ್ದು, ಉಳಿದ ದಿನಗಳಂದು ರಾಜ್ಯಪಾಲರ ಭಾಷಣದ ಮೇಲೆ ಚರ್ಚೆ ನಡೆಯಲಿದೆ. ಮಾರ್ಚ್‌ನಲ್ಲಿ 2021-2022ನೇ ಸಾಲಿನ ಆಯವ್ಯಯ ಮಂಡಿಸಲು ತೀರ್ಮಾನಿಸಿದ್ದು, ದಿನಾಂಕ ಇನ್ನೂ ನಿಗದಿಪಡಿಸಿಲ್ಲ ಎಂದರು.



**ಪೊಲೀಸರಿಗೆ 10,034 ಮನೆ:** ಪೊಲೀಸರ ವಸತಿ ಸಮಸ್ಯೆ ನೀಗಿಸುವ ಸಂಬಂಧ ರಾಜ್ಯದಲ್ಲಿ 10,034 ವಸತಿ ಗೃಹ ನಿರ್ಮಿಸಲು ಉದ್ದೇಶಿಸಿದೆ. ಐದು ವರ್ಷಗಳ ಅವಧಿಯಲ್ಲಿ ಈ ಮನೆ ನಿರ್ಮಿಸಲು 2 ಸಾವಿರ ಕೋಟಿ ರೂ.ಗಳಿಗೆ ಆಡಳಿತಾತ್ಮಕ ಅನುಮೋದನೆ ನೀಡಿದೆ. ಪೊಲೀಸ್ ಪೇದೆಗಳು ಹಾಗೂ ಪೊಲೀಸ್ ಇನ್ಸ್‌ಪೆಕ್ಟರ್‌ಗಳಿಗೆ ಈ ವಸತಿ ಗೃಹಗಳನ್ನು ನಿರ್ಮಿಸಲಾಗುತ್ತಿದೆ ಎಂದು ಸಚಿವ ಮಾಧುಸ್ವಾಮಿ ಹೇಳಿದರು.

## ಪ್ರಮುಖ ತೀರ್ಮಾನಗಳು

- ಕರೊನಾ ವೇಳೆ ರೇಷ್ಮೆ ಬೆಳೆಗಾರರಿಗೆ ಸಬ್ಸಿಡಿ ನೀಡಲಾಗಿತ್ತು. ಅದಕ್ಕಾಗಿ 15 ಕೋಟಿ ರೂ. ಖರ್ಚಾಗಿದ್ದು, ಘಟನೋತ್ತರ ಅನುಮೋದನೆ ಪಡೆಯಾಗಿದೆ.
- ಚಿತ್ರದುರ್ಗದ ಮುರುಘಾಮಠದ ಆವರಣದಲ್ಲಿ 20 ಕೋಟಿ ರೂ. ವೆಚ್ಚದಲ್ಲಿ ನಿರ್ಮಾಣ ಆಗುತ್ತಿರುವ 325 ಅಡಿ ಎತ್ತರದ ಬಸವೇಶ್ವರ ಕಂಚಿನ ಪ್ರತಿಮೆಗೆ ಈಗಾಗಲೇ ಬಿಡುಗಡೆ ಆಗಿರುವ 10 ಕೋಟಿ ರೂ. ಜತೆ ಮತ್ತೆ 5 ಕೋಟಿ ಹಣ ಬಿಡುಗಡೆ
- ಬರಗಾಲಕ್ಕೆ ತುತ್ತಾಗಿದ್ದ ತುಮಕೂರು ಜಿಲ್ಲೆ ತಿಪಟೂರು ತಾಲೂಕಿನ 96 ಕೆರೆಗೆ ನೀರು ತುಂಬಿಸಲು ಸಣ್ಣ ನೀರಾವರಿ ಇಲಾಖೆಗೆ 200 ಕೋಟಿ ರೂ.ಅನುದಾನ ನೀಡಲು ಆಡಳಿತಾತ್ಮಕ ಅನುಮೋದನೆ
- ದಾವಣಗೆರೆ ಜಿಲ್ಲೆಯ ಅನಗೋಡಿನಲ್ಲಿ ಕ್ರಷರ್ ಘಟಕ ನಿರ್ಮಾಣಕ್ಕೆ ಖಾಸಗಿ ಸಂಸ್ಥೆಗೆ 12 ಎಕರೆ ಭೂಮಿಯನ್ನು 30 ವರ್ಷ ಗುತ್ತಿಗೆ ನೀಡಿಕೆ
- ಕೌಶಲ್ಯಾಭಿವೃದ್ಧಿ ಇಲಾಖೆ ಮೂಲಕ 150 ಐಟಿಐ ಕಾಲೇಜುಗಳನ್ನು ಉನ್ನತೀಕರಿಸಲು ಟಾಟಾ ಟೆಕ್ನಾಲಜೀಸ್ ಜತೆ ಒಪ್ಪಂದ, ಶೇ.88 ಷೇರನ್ನು ಟಾಟಾ ಟೆಕ್ನಾಲಜೀಸ್ ಹೂಡಿಕೆ ಮಾಡಲಿದೆ. 150 ಕೋಟಿ ರೂ. ಗಳಲ್ಲಿ ಕಟ್ಟಡ ಹಾಗೂ ಕಟ್ಟಡ ದುರಸ್ತಿಗೆ ವಿನಿಯೋಗಿಸಲು ಸಮ್ಮತಿ ನೀಡಲಾಗಿದೆ.
- ಸಮಗ್ರ ಜಲಸಂಪನ್ಮೂಲ ಉನ್ನತ ಕೇಂದ್ರದ ಕಮಿಟಿ ರಚನೆಗೆ ಒಪ್ಪಿಗೆ ನೀಡಲಾಗಿದೆ, ನಾಗಮಂಗಲ ತಾಲೂಕು ಬೆಳ್ಳೂರು 25.23 ಎಕರೆ ಗೋಮಾಳ ಜಮೀನು ಶ್ರೀ ಆದಿಚುಂಚನಗಿರಿ ಎಜುಕೇಷನ್ ಟ್ರಸ್ಟ್‌ಗೆ
- ಆದಿಚುಂಚನಗಿರಿ ಪೀಠಾಧ್ಯಕ್ಷರಾಗಿದ್ದ ಶ್ರೀ ಬಾಲಗಂಗಾಧರ ನಾಥ ಸ್ವಾಮೀಜಿಯವರ ಹುಟ್ಟೂರಾದ ರಾಮನಗರ ಜಿಲ್ಲೆಯ ಮಾಗಡಿ ತಾಲ್ಲೂಕಿನ ಬಾನಂದೂರಿನಲ್ಲಿ 25 ಕೋಟಿ ವೆಚ್ಚದಲ್ಲಿ ಪಾರಂಪರಿಕ, ಸಾಂಸ್ಕೃತಿಕ ತಾಣ ನಿರ್ಮಾಣ
- ಅಂಗವಿಕಲ, ಹಿರಿಯ ನಾಗರಿಕ ಸಬಲೀಕರಣ ಕಾಯ್ದೆಗೆ ತಿದ್ದುಪಡಿ ತಂದು ಶೇ.50 ನೇರ ನೇಮಕಾತಿಗೆ ಅವಕಾಶ, ಶೇ.50 ಕೆಳ ಹಂತದಿಂದ ಪ್ರಥಮ ದರ್ಜೆ ಗುಮಾಸ್ತರವರೆಗೆ ಬಡ್ತಿಗೆ ಅವಕಾಶ
- ನಾಗವಾರದಲ್ಲಿ 27 ಗುಂಟೆ ಬಿ ಕರಾಬು ಜಮೀನು ಖಾಸಗಿಯವರಿಗೆ ಮಾರಾಟಕ್ಕೆ ಅವಕಾಶ
- ಕರ್ನಾಟಕ ಲೋಕಾಯುಕ್ತದಲ್ಲಿ ಅಡಿಷನಲ್ ರಿಜಿಸ್ಟ್ರಾರ್ (ತನಿಖೆ) ಆಗಿರುವ ನಿವೃತ್ತ ಜಿಲ್ಲಾ ಮತ್ತು ಸೆಷನ್ಸ್ ಜಡ್ಜ್ ನ್ಯಾ. ಸೋಮರಾಜು ಸೇವೆ ಗುತ್ತಿಗೆ ಆಧಾರದ ಮೇಲೆ 1 ವರ್ಷದವರೆಗೆ ಮುಂದುವರಿಕೆ
- ಪ್ರಾಥಮಿಕ ಶಿಕ್ಷಣ ಇಲಾಖೆಯ ಉಪ ನಿರ್ದೇಶಕಿ ಎಚ್.ಎಂ.ಪ್ರೇಮ ಮತ್ತು ಇತರ ನಾಲ್ವರ ವಿರುದ್ಧ ಕರ್ತವ್ಯ ನಿರ್ಲಕ್ಷ್ಯ ಹಾಗೂ ಹಣಕಾಸು ದುರ್ಬಳಕೆ ವಿರುದ್ಧ ಉಪ ಲೋಕಾಯುಕ್ತರು ವಿಧಿಸಿರುವ ದಂಡದ ಶಿಫಾರಸು ತಿರಸ್ಕಾರ

## ಜನತೆಗೆ ಆಸ್ತಿ ತೆರಿಗೆ ಬರೆ

ಮೊದಲನೇ ಪುಟದಿಂದ...

**ಖಾಲಿ ಸೈಟ್‌ಗೂ ಕಡ್ಡಾಯ:** ಈವರೆಗೆ ಕಟ್ಟಡಕ್ಕೆ ಹೊಂದಿಕೊಂಡ ಖಾಲಿ ನಿವೇಶನ ಎಷ್ಟೇ ವಿಸ್ತೀರ್ಣವಿದ್ದರೂ ಅದಕ್ಕೆ ಯಾವುದೇ ತೆರಿಗೆ ವಿಧಿಸುತ್ತಿರಲಿಲ್ಲ. ಇದೀಗ ಕಟ್ಟಡಕ್ಕೆ ಹೊಂದಿಕೊಂಡ ನಿವೇಶನದಲ್ಲಿ 1,000 ಚ. ಅಡಿವರೆಗೆ ತೆರಿಗೆ ವಿನಾಯಿತಿ ನೀಡುವುದರ ಜತೆಗೆ 1000 ಚ.ಅಡಿಗಿಂತ ಹೆಚ್ಚು ವಿಸ್ತೀರ್ಣದ ಖಾಲಿ ಜಾಗ/ ನಿವೇಶನಕ್ಕೆ ತೆರಿಗೆ ವಿಧಿಸಲು ಸಚಿವ ಸಂಪುಟ ಸಭೆ ನಿರ್ಧರಿಸಿದೆ ಎಂದು ತಿಳಿಸಿದರು.

**ಮಾರುಕಟ್ಟೆ ಮೌಲ್ಯ ಪರಿಗಣನೆ:** ಈವರೆಗೆ ವಸತಿ, ವಸತಿಯೇತರ ಕಟ್ಟಡಗಳಿಗೆ ಆಸ್ತಿಯ ಮಾರ್ಗಸೂಚಿ ದರದ ಶೇ.50 ಮೌಲ್ಯ ಆಧಾರವಾಗಿಟ್ಟುಕೊಂಡು ತೆರಿಗೆ ವಿಧಿಸಲಾಗುತ್ತಿತ್ತು. ಇದೀಗ ಆಸ್ತಿಯ ಸದ್ಯದ ಮಾರುಕಟ್ಟೆ ದರದ ಶೇ.25 ಮೌಲ್ಯದ ಆಧಾರದ ಮೇಲೆ ತೆರಿಗೆ ವಿಧಿಸಲು ನಿರ್ಧರಿಸಲಾಗಿದೆ. ಹಾಗೆಯೇ ನಿವೇಶನಗಳಿಗೂ ಆಸ್ತಿಯ ಮಾರುಕಟ್ಟೆ ದರದ ಶೇ. 25 ತೆರಿಗೆ ವಿಧಿಸಲು ಅವಕಾಶ ಕಲ್ಪಿಸಲು ಸಂಪುಟ ಒಪ್ಪಿಗೆ ಸೂಚಿಸಿದೆ ಎಂದು ಮಾಧುಸ್ವಾಮಿ ಹೇಳಿದರು.

**ಉದ್ದೇಶಗಳೇನು?:** • ಈ ತಿದ್ದುಪಡಿಯಿಂದ ಸ್ಥಳೀಯ ಸಂಸ್ಥೆಗಳಿಗೆ ಆಸ್ತಿ ತೆರಿಗೆ ಆದಾಯ ಹೆಚ್ಚಳವಾಗಲಿದೆ • ಸ್ಥಳೀಯ ಸಂಸ್ಥೆಗಳು ಆರ್ಥಿಕವಾಗಿ ಬಲಗೊಳ್ಳುತ್ತವೆ. • 2020-2021ನೇ ಸಾಲಿಗೆ ರಾಜ್ಯದ ಜಿಡಿಪಿಯ ಶೇ.0.25 ಭಾಗವನ್ನು ಹೆಚ್ಚುವರಿಯಾಗಿ ಎರವಲಾಗಿ ಕೇಂದ್ರದಿಂದ ಪಡೆಯಲು ಸಾಧ್ಯವಾಗುತ್ತದೆ.